


# ಉಸಿರಿನ ಪರಿಮಳ

ಟೀಚರು ಪಾಠ ಮಾಡುತ್ತಾ...
'ಇದು ಬೇರು ಇದು ಕಾಂಡ ಇದು ಎಲೆ ಇದು ದೇಟು ಇದು ದೇಟಿನ ಟೋಪಿ ಇದು ಹೂವು ಇವು ದಳಗಳು ಇದು ಕೇಸರ ಇದು ಅಣುರೇಣು' ಎಂದು ಒಂದೊಂದನ್ನೇ ಕಿತ್ತು ಕಿತ್ತು ಮೇಜಿನ ಮೇಲೆ ಬೇರೇ ಬೇರೆಯಾಗಿ ಇಟ್ಟು ಮಕ್ಕಳಿಗೆ ತೋರಿಸಿದರು.

ಮುಂದಿನ ಸಾಲಿನಲ್ಲಿ ಕುಳಿತಿದ್ದ ಹುಡುಗಿ ಕುತೂಹಲದಿಂದ 'ಪರಿಮಳ?' ಎಂದು ಕೇಳಿದಳು. ಅವಳು ಇಡಿಯಾಗಿ ಗಿಡ ಹೂವು ನೋಡಿದ್ದಳಷ್ಟೇ... ಹೀಗೆ ಬಿಡಿ ಬಿಡಿಯಾಗಿ ನೋಡಿದ್ದು ಇದೇ ಮೊದಲು!

ಮತ್ತೆ ಯೋಚಿಸಿ ಏನೋ ಹೊಳೆದಂತೆ...
'ಗಿಡ ಹೂವು ಎಲ್ಲಾ ಸತ್ತೋತು ಪಾಪ' ಎಂದು ನುಡಿದು ಬಾಯಿ ಮುಚ್ಚಿಕೊಂಡು ಕುಳಿತಳು.

ಟೀಚರು ಸುಮ್ಮನೆ ಅವಳ ಮುಖ ನೋಡಿದರು.

❖

### ಸವಿತಾ ನಾಗಭೂಷಣ

ಮೂಲತಃ ಚಿಕ್ಕಮಗಳೂರಿನವರು. ಪ್ರಸ್ತುತ ಶಿವಮೊಗ್ಗದಲ್ಲಿ ವಾಸ. 'ಜಾತ್ರೆಯಲ್ಲಿ ಶಿವ' ಅವರ ಅನನ್ಯ ಕವನ. 'ನಾ ಬರುತ್ತೇನೆ ಕೇಳು', 'ಹೊಳೆಮಗಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ದರುಶನ', 'ಕರುಣಾಳು', 'ಆಕಾಶಮಲ್ಲಿಗೆ', 'ಕಾಡುಲಿಲ್ಲಿ ಹೂಗಳು', 'ಸ್ತ್ರೀಲೋಕ', 'ಹೂ ಮನಸಿನ ಹೋರಾಟಗಾರ ಮತ್ತು ಇತರ ಲೇಖನಗಳು' ಪ್ರಕಟಿತ ಕೃತಿಗಳು.